ಆ ಸಣ್ಣ ಮೋಟಾರು ಬೋಟಿನಲ್ಲಿ ನದಿ ಜನರ ಜೊತೆಯಲ್ಲಿ 28 ಗಂಟೆಗಳ ಕಾಲ ತೇಲಿಹೋದ ಅನುಭವವನ್ನು ನಾನು ಮರೆಯುವಂತೆಯೇ ಇಲ್ಲ.

ನನ್ನ ಬದುಕು ಮತ್ತು ಪಯಣ ಜೊತೆ ಜೊತೆಯಾಗಿ ಸಾಗಿದೆ. ನನ್ನ ಪ್ರವಾಸದಲ್ಲಿಯ ಜೀವನ ದರ್ಶನ ನನಗೆ ಅಮೂಲ್ಯವೆನಿಸಿದೆ. ನಾನು ಕಂಡ ಜನರನ್ನು, ಜಗತ್ತನ್ನು ಪ್ರತಿಬಿಂಬಿಸುವ ಸಣ್ಣ ಪ್ರಯತ್ನ ನನ್ನ ಬರಹದ್ದಾಗಿದೆ.

ಈಗ ಬರೆಯ ಹೊರಟಿರುವ ಪಂಜಾಬಿನ ಹಿನ್ನೆಲೆಯ ಕಾದಂಬರಿ 'ತುಹಡ್ಡೆನಾಲ್' ಕೂಡಾ ಅಮೃತಸರದ ಜಲಿಯನ್‌ವಾಲಾಬಾಗ್‌ನಿಂದ ಹೊರಟು ಸರಹದ್ದಿನ ಅಂಚಿನಲ್ಲಿರುವ ಭಗತ್‌ಸಿಂಗ್ ಅವರ ಸಮಾಧಿಯ ತಾಣ 'ಹುಸೇನಿವಾಲ'ದ ವರೆಗಿನ ನನ್ನ ಪ್ರವಾಸದ ಹಿನ್ನೆಲೆಯನ್ನು ಹೊಂದಿದೆ. ಕೆಲವು ವರ್ಷಗಳ ಹಿಂದೆ ಕೈಗೊಂಡ ಈ ಪ್ರವಾಸದಲ್ಲಿ ನನ್ನ ಸಂಗಾತಿ ಮತ್ತು ಗೈಡ್ ನನ್ನ ಪತಿ ಕೀರ್ತಿ ಮಲ್ಹೋತ್ರ!

◆ **ನಿಮ್ಮ ಸಾಹಿತ್ಯಲೋಕದ ಮುಖ್ಯ ಪಾತ್ರಗಳು ಪ್ರತಿಕೂಲ ಸನ್ನಿವೇಶಗಳನ್ನು ಎದುರಿಸುವಂತಹ ದಿಟ್ಟತನ ಮೆರೆಯುವಂತಹವು. ಆದರ್ಶಗಳನ್ನು ಪ್ರತಿನಿಧಿಸುವಂತಹವರು. ಬದುಕಿನ ನಕಾರಾತ್ಮಕತೆಯನ್ನು ಮೀರಿ ಸಕಾರಾತ್ಮಕತೆಯೆಡೆ ಹೆಜ್ಜೆ ಇರಿಸುವ ಧ್ವನಿ ನಿಮ್ಮ ಕೃತಿಗಳಲ್ಲಿ ಸ್ಥಾಯಿಯಾಗಿದೆ. ಇಂತಹ ದೃಷ್ಟಿಕೋನದ ಪ್ರತಿಪಾದನೆಯು ಪ್ರಜ್ಞಾಪೂರ್ವಕ ಆಯ್ಕೆ ಎನ್ನಬಹುದೆ?**

ನಿಜ, ಇದು ಪ್ರಜ್ಞಾಪೂರ್ವಕ ಆಯ್ಕೆ. ಇಂತಹ ಚಿಂತನೆ ಅಸಾಧುವಾಗಲಿ, ಅಸಾಧ್ಯವಾಗಲಿ,



ಲೇಖಕಿ ನೇಮಿಚಂದ್ರ ಅವರೊಂದಿಗೆ ಸಂದರ್ಶಕಿ ಸಿ.ಜಿ. ಮಂಜುಳಾ